# ಅಮರ ಮಧುರ ಪ್ರೇಮ, ನೀ ಬಾ ಬೇಗ ಚಂದಮಾಮ

ಅಮ್ಮುವಿನ ಕೊಲೆಗೆ ಸಂಬಂಧಿಸಿದಂತೆ ಜಾಹ್ನವಿ ಸುಳಿವು ನೀಡಿದಾಗ ಅವಳನ್ನು ಭೇಟಿ ಮಾಡಲು ಮಾಯಣ್ಣ ಜಾಹ್ನವಿ ಮನೆಗೆ ಹೋದ. ಆಗ ಮನೆಯ ಮಹಡಿ ಮೇಲೆ ಹಿಂದೊಮ್ಮೆ ಮಾತುಕತೆ ನಡೆದ ವಿಶಾಲವಾದ ಡೈನಿಂಗ್ ಹಾಲ್‌ನಲ್ಲಿದ್ದ ಸೋಫಾದ ಮೇಲೆ ಮಾಯಣ್ಣನನ್ನು ಕುಳ್ಳಿರಿಸಿ, ಎದುರಿನ ಸೋಫಾದಲ್ಲಿ ತಾನು ಕೂತಳು. ಡೈನಿಂಗ್ ಟೇಬಲ್ ಮೇಲೆ ಇವತ್ತೂ ಕೂಡ ಒಂದು ದೊಡ್ಡ ವೈನ್ ಬಾಟಲ್ ಇತ್ತು. ಹೆಣೆಯದೆ, ಕಟ್ಟದೆ, ಹಾಗೇ ಭುಜದ ತನಕ ಇಳಿಬಿಟ್ಟ ದಟ್ಟ ಕೂದಲು, ಅಂದ ಆಕಾರಗಳಿಗೆ ಇನ್ನಷ್ಟು ಇಂಬುಕೊಡುವಂತೆ ತೊಟ್ಟ, ಚರ್ಮದ ಬಣ್ಣಕ್ಕೆ ತದ್ವಿರುದ್ಧವಾದ ಕಡುಕಪ್ಪು ಸ್ಲೀವ್‌ಲೆಸ್ ರವಿಕೆ, ತಿಳಿನೀಲಿ ಬಣ್ಣದ ತೆಳುಸೀರೆ, ಮಾದಕ ತೇಲುನೋಟ, ಸೌಮ್ಯವಾದ ಸುಗಂಧ, ತುಸು ಹೆಚ್ಚಾಗಿಯೇ ಸೇವಿಸಿದ್ದ ವೈನ್‌ನಿಂದಾಗಿ ಮಂದ್ರವಾಗಿದ್ದ ನುಡಿ ನಡಿಗೆ... ಒಟ್ಟಾರೆ ಮಾಯಣ್ಣನನ್ನು ಕೆಣಕಿ ಕೆಡವುವಂತಿತ್ತು. ಲಘು–ಬಿಗಿಯ ಹದ ತಪ್ಪದ ಹಾಗೆ ಮಾಯಣ್ಣ ಮಾತು ಆರಂಭಿಸಿದ್ದ.

‘ಅಮ್ಮು ಅವರ ಕೊಲೆಗೆ ಸಂಬಂಧಿಸಿದ ಏನೋ ಮಾಹಿತಿ ಇದೆ ಅಂತ ಫೋನ್ ಮಾಡಿದ್ರಿ...’

ಅದಕ್ಕೆ ಉತ್ತರಿಸುವ ಗೋಜಿಗೆ ಹೋಗದೆ ತಲೆ ತುಸು ಬಾಗಿಸಿ ನಗಲಾರಂಭಿಸಿದಳು ಜಾಹ್ನವಿ.

‘ಯಾಕೆ... ಏನಾಯ್ತು...?’

‘ನಿಮಗೆ ಹೀರೊ ಲುಕ್ಸ್ ಇರಬಹುದು. ಆದರೆ ನೀವು ಹಾರಿಬಲ್ ಆ್ಯಕ್ಟರ್. ಜಾಹ್ನವಿ ಜೊತೆ ಬಿಗಿಯಾಗಿರಬೇಕು. ಜಾಹ್ನವಿ ಜೊತೆ ಅಂತರ ಕಾಯ್ದುಕೊಳ್ಳಬೇಕು ಅಂತ ತುಂಬಾನೆ ಯೋಚನೆ ಮಾಡ್ಕೊಂಡು ಬಂದಿದ್ದೀರ ಅಂತ ಎಷ್ಟು ಚೆನ್ನಾಗಿ ಕಾಣುತ್ತೆ ಗೊತ್ತಾ? ನಾನು ಸೈಕಾಲಜಿ ಮೇಜರ್ ತಗೊಂಡು ಡಿಗ್ರಿ ಮಾಡಿರೋದು. ನಾನು ಅಷ್ಟೊಂದು ಅಪಾಯಕಾರೀನಾ ಮಾಯಣ್ಣನವರೆ?’

‘ಇಲ್ಲ, ಹಾಗೇನಿಲ್ಲ. ನನ್ನ ತನಿಖೆ ಕುಂಟ್ತಾಯಿದೆಯಲ್ಲ ಅಂತ ಹತಾಶೆ ಅಷ್ಟೆ’.

‘ಚಿಂತೆ ಬೇಡ ಮಾಯಣ್ಣ... ಸಾರಿ ಮಾಯಣ್ಣ ಅವರೇ... ನಾನು ನಿಮಗೆ ಕೆಲವು ಮುಖ್ಯವಾದ ಸುಳಿವುಗಳನ್ನ ಕೊಡಬಲ್ಲೆ. ಈಗ ಮೊದಲು ಕಾಫಿ ತರ್ತೀನಿ. ಅದಕ್ಕೆ ಮುಂಚೆ ನಿಮ್ಮ ಸನ್‌ಗ್ಲಾಸ್ ಕೊಡ್ತೀನಿ ಇರಿ’.

ಸೋಫಾದಿಂದ ಸ್ವಲ್ಪ ಮೇಲೆದ್ದು ಆಯತಪ್ಪಿ ಹಾಗೆ ಮತ್ತೆ ಕುಸಿದು ಕುಳಿತಳು.

‘ಡೀಪ್ ಕುಷನ್ಸ್ ಯು ನೊ...’

‘ನಿಮಗೆ ಊಟದ ಜೊತೆ ವೈನ್ ಅಭ್ಯಾಸವಾ?’

‘ಇವತ್ತು ಸ್ವಲ್ಪ ಜಾಸ್ತಿನೇ ಆಯ್ತೇನೊ...’

ಮತ್ತೆ ಮೇಲೆದ್ದು ಕಿಚನ್‌ಗೆ ಹೋಗಿ, ಎರಡು ಹೆಜ್ಜೆಯ ಒಂದು ಪ್ಲಾಸ್ಟಿಕ್ ಸ್ಟೂಲನ್ನು ತಂದು ಎತ್ತರದ ಕಪಾಟಿನ ಕೆಳಗಿಟ್ಟು ಅದರ ಮೇಲೇರಿ, ಕಪಾಟಿನಿಂದ ಮಾಯಣ್ಣನ ಸನ್‌ಗ್ಲಾಸ್ ತೆಗೆದು ಕೆಳಗಿಳಿಯಲು ಯತ್ನಿಸುತ್ತಿದ್ದಂತೆ, ಕೆಳಗಿನ ದಪ್ಪನೆಯ ಕಾರ್ಪೆಟ್‌ನಿಂದಾಗಿ ಸ್ಟೂಲು ಸ್ವಲ್ಪ ಅಲುಗಾಡುತ್ತಿತ್ತು.

‘ಮಾಯಣ್ಣ, ಪ್ಲೀಸ್ ಸ್ಟೂಲನ್ನು ಹಿಡ್ಕೊಳ್ಳಿ...’

ಮಾಯಣ್ಣ ಎದ್ದು ಬಂದು ಎರಡೂ ಕೈಯಿಂದ ಸ್ಟೂಲನ್ನು ಹಿಡಿದುಕೊಳ್ಳಲು, ಮಾಯಣ್ಣನ ಕಡೆ ತಿರುಗಿ ನಿಂತ ಜಾಹ್ನವಿ, ಆ ಕಪ್ಪು ಕನ್ನಡಕವನ್ನು ಮಾಯಣ್ಣನ ಕಣ್ಣಿಗೆ ಹಾಕಿ ತೆಗೆಯುತ್ತಾ–

